# ಶ್ರೀಮಾತೆಯವರೊಡನೆ ಮಾತುಕತೆ



## ಭಕ್ತೆ ಸರಯೂ ಬಾಲಾ ದೇವಿ ಅವರ ನೆನಪುಗಳು

ಶ್ರೀಮಾತೆಯ ಬಳಿ ಎಷ್ಟು ಜನ ತಮ್ಮ ಆಂತರಿಕ ಸುಖ–ದುಃಖಗಳನ್ನು ಹೇಳಿಕೊಳ್ಳುತ್ತಿದ್ದರು! ಮೂರ್ಖಳಾದ ನನಗೆ ಅದು ಹೇಗೆ ತಾನೆ ತಿಳಿಯಬೇಕು? ಶ್ರೀಮಾತೆಯವರ ಮನೆಗೆ ಬಂದಾಗ, ಎಲ್ಲಿದ್ದರೂ ಸರಿಯೆ, ಮೊದಲು ಅವರ ಬಳಿ ಹೋಗುತ್ತಿದ್ದೆ. ಇಂದು ಇಬ್ಬರು ಶ್ರೀಮಂತ ಮಹಿಳೆಯರಿಗೆ ಶ್ರೀಮಾತೆಯವರು ಮನೆಯ ಉತ್ತರ ವರಾಂಡದಲ್ಲಿ ನಿಂತುಕೊಂಡು, ರಹಸ್ಯವಾಗಿ ಏನನ್ನೋ ಹೇಳುತ್ತಿದ್ದಾರೆ. ನಾನು ಶ್ರೀಮಾತೆಯವರನ್ನು ನೋಡಿದ ತಕ್ಷಣ ಅವರ ಬಳಿಗೆ ಓಡಿಹೋದೆ. ಶ್ರೀಮಾತೆ ಹೇಳುತ್ತಿದ್ದಾರೆ: "ಶ್ರೀರಾಮಕೃಷ್ಣರ ಬಳಿ ನಿನ್ನ ಮನಸ್ಸಿನ ದುಗುಡವನ್ನು ಮುಂದಿಟ್ಟು, ಪ್ರಾರ್ಥಿಸು. ಮನಬಿಚ್ಚಿ ಹೃದಯದ ದುಗುಡವನ್ನು ಅಳುತ್ತಾ ಹೇಳು – ನಿನ್ನ ಮಡಿಲನ್ನು ಅವರು ತುಂಬುವರು" ಎಂದು. ಸಂತಾನಪ್ರಾಪ್ತಿಗಾಗಿ ಇವರು ಪ್ರಾರ್ಥಿಸುತ್ತಿರುವುದು ನನಗೆ ತಿಳಿಯಿತು. ನನ್ನನ್ನು ಕಂಡು ಅವರಿಬ್ಬರೂ ನಾಚಿಕೆಪಟ್ಟುಕೊಂಡರು. ಅವರಿಗೆ ಹೋಲಿಸಿದಲ್ಲಿ ನನ್ನ ಅವಸ್ಥೆಯೇ ಪರವಾಗಿಲ್ಲ ಎನ್ನಿಸಿತು. ಅಂದು ನಾನು ಒಂದು ದೊಡ್ಡ ಪಾಠ ಕಲಿತೆ. ಮನಸ್ಸಿನಲ್ಲಿಯೇ ನಿಶ್ಚಯಮಾಡಿಕೊಂಡೆ, ಇನ್ನೆಂದೂ ಸೂಚನೆ ಕೊಡದೆ ಒಮ್ಮೆಗೇ ಶ್ರೀಮಾತೆಯವರನ್ನು ನೋಡಲು ಧಾವಿಸುವುದಿಲ್ಲ ಎಂದು. ಕೆಲವು ತಿಂಗಳುಗಳ ಬಳಿಕ ಆ ಇಬ್ಬರು ಸ್ತ್ರೀಯರನ್ನು ಮತ್ತೆ ನೋಡಿದೆ. ಆಗ ಅವರಿಬ್ಬರೂ ಗರ್ಭಿಣಿಯಾಗಿದ್ದರು.

ಗೌರೀ ಮಾ ಇಂದು ಬಂದಿದ್ದಾರೆ. ಅವರನ್ನು ಶ್ರೀರಾಮಕೃಷ್ಣರ ಬಗ್ಗೆ ತಿಳಿಸಲು ಒತ್ತಾಯಿಸಿದೆ. ಅವರು ಹೇಳಿದರು: "ಶ್ರೀರಾಮಕೃಷ್ಣರ ಬಳಿಗೆ ನಾನು ಮೊದಮೊದಲಿಗೇ ಹೋಗಿದ್ದೆ. ಆಮೇಲಷ್ಟೆ ಮಿಕ್ಕವರೆಲ್ಲ ಬರಲು ಪ್ರಾರಂಭಿಸಿದ್ದು. ನರೇಂದ್ರ, ಕಾಲಿ ಎಲ್ಲರನ್ನೂ ಚಿಕ್ಕ ವಯಸ್ಸಿನಿಂದ ನೋಡಿದ್ದೇನೆ." ಸಮಯ ಹೆಚ್ಚು ಇರಲಿಲ್ಲ, ಆದ್ದರಿಂದ ಹೆಚ್ಚು ಮಾತನಾಡಲೂ ಆಗಲಿಲ್ಲ. ಗೌರೀ ಮಾ ಶ್ರೀಮಾತೆಗೆ ನಮಸ್ಕರಿಸಿ, ಅವರಿಂದ ಬೀಳ್ಕೊಂಡರು. ನಾನೂ ಹೊರಟು ನಿಂತೆ. ನಮಸ್ಕಾರ ಮಾಡಿದಾಗ, ಶ್ರೀಮಾತೆಯವರು ನನ್ನನ್ನು ವರಾಂಡಕ್ಕೆ ಕರೆದು, ಪ್ರಸಾದ ಕೊಟ್ಟರು. "ಹೋಗಿ ಬಾಮ್ಮಾ, ನನ್ನ ಮಕ್ಕಳೆಲ್ಲ ಬರುತ್ತಾರೆ. ಒಬ್ಬೊಬ್ಬರೇ ಹೊರಟು ಹೋಗುತ್ತಾರೆ. ಒಮ್ಮೆ ನೀನು ಬೆಳಗ್ಗೆ ಏಳು ಗಂಟೆಗೇ ಬಂದುಬಿಡು. ಇಲ್ಲೇ ಊಟ ಮಾಡುವೆಯಂತೆ" ಎಂದರು.

### ರಥಯಾತ್ರೆಯ ದಿನ

ಇಂದು ಬೆಳಗ್ಗೆ ಏಳು ಗಂಟೆಗೇ ಆಹ್ವಾನದ ಮೇರೆಗೆ ಗೌರೀ ಮಾ ಅವರ ಆಶ್ರಮಕ್ಕೆ ಹೋಗಿದ್ದೆ. ಅಲ್ಲೇ ಪ್ರಸಾದದ ವ್ಯವಸ್ಥೆ ಆಗಿತ್ತು. ಆದಷ್ಟು ಬೇಗ ಶ್ರೀಮಾತೆಯವರ ಬಳಿಗೆ ಹೋಗಬೇಕು ಎಂದು ನನ್ನ ಬಯಕೆ. ಆದರೆ ನೈವೇದ್ಯವೆಲ್ಲ ಮುಗಿದು, ಭಕ್ತರ ಊಟ ಆಗುವ ವೇಳೆಗೆ ಮಧ್ಯಾಹ್ನ ಎರಡು ಗಂಟೆ ಆಗಿತ್ತು. ನಾಲ್ಕು ಗಂಟೆಗೆ ಗೌರೀ ಮಾ ಜೊತೆಗೆ ಶ್ರೀಮಾತೆಯವರ ಮನೆಗೆ ಹೋದೆ. ಶ್ರೀಮಾತೆಯವರು ಮಧ್ಯಾಹ್ನದ ಪ್ರಸಾದವನ್ನು ವಿತರಿಸುತ್ತ ಕುಳಿತಿದ್ದರು. ಅನಂತರ ಅವರಿಗೆ ನಾನು, ಗೌರೀ ಮಾ ನಮಸ್ಕರಿಸಿದೆವು. ಗೌರೀ ಮಾ ಶ್ರೀಮಾತೆಯವರನ್ನು ಏಕಾಂತದಲ್ಲಿ ಕಂಡು ಏನನ್ನೋ ಮಾತನಾಡಿದರು. ಆಮೇಲೆ ನನ್ನನ್ನು ಕರೆದರು. ಶ್ರೀಮಾತೆಯವರಿಗಾಗಿ ತಂದ ಮಡಿಬಟ್ಟೆಯನ್ನು (ಮಗುಟ, ನಾರುಮಡಿ ಎಂದೂ ಹೇಳುತ್ತಾರೆ) ಅವರ ಪದತಲದಲ್ಲಿಟ್ಟು ನಮಸ್ಕರಿಸಿ ಹೇಳಿದೆ: " ಅಮ್ಮಾ, ದಯಮಾಡಿ ಇದನ್ನು ಉಟ್ಟುಕೊಳ್ಳಿ." ಅವರು ನಗುತ್ತ, "ಉಟ್ಟುಕೊಳ್ಳದೇ ಏನು" ಎಂದು ಹೇಳಿದರು.

ಗೌರೀ ಮಾ ಪ್ರೀತಿಯಿಂದ ನನ್ನನ್ನು ಹೊಗಳಲು ತೊಡಗಿದರು. ಅದಕ್ಕೆ ಶ್ರೀಮಾತೆಯವರೂ ದನಿಗೂಡಿಸಿದರು. ದೇವರ ಮನೆಯಲ್ಲಿ ಮಾಸ್ಟರ್ ಮಹಾಶಯನ ಹೆಂಡತಿ, ಮಗಳು ಮತ್ತು ಇತರ ಭಕ್ತೆಯರು ಇದ್ದರು. ನನಗೆ ಅವರ ಪರಿಚಯ ಹೆಚ್ಚಾಗಿ ಇರಲಿಲ್ಲ. ಅವರ ಜೊತೆಗೆ ಸ್ವಲ್ಪ ಮಾತನಾಡುವ ಹೊತ್ತಿಗೆ, ಶ್ರೀಮಾತೆಯವರನ್ನು ನೋಡಲು ಪುರುಷ ಭಕ್ತರು ಬರುತ್ತಿದ್ದಾರೆ ಎಂದು ತಿಳಿದುಬಂತು. ನಾವೆಲ್ಲರೂ ವರಾಂಡಾದ ಕಡೆಗೆ ಹೊರಟೆವು. ಪುರುಷ ಭಕ್ತರಲ್ಲಿ ಒಬ್ಬನು ತಾನು ತಂದಿದ್ದ ಸುಂದರವಾದ ಗುಲಾಬಿ, ಮುತ್ತುಗ ಮೊದಲಾದ ಹೂವುಗಳನ್ನೂ, ಹಣ್ಣುಗಳು ಮತ್ತು ಸಿಹಿತಿಂಡಿಗಳನ್ನೂ ಒಂದೊಂದಾಗಿ ಶ್ರೀಮಾತೆಯವರ ಚರಣಗಳಿಗೆ ಅರ್ಪಿಸುತ್ತ ಪೂಜಿಸಲಾರಂಭಿಸಿದ. ಕೊನೆಯಲ್ಲಿ, ಸಿಹಿ ಮತ್ತು ಹಣ್ಣುಗಳಲ್ಲಿ ಸ್ವಲ್ಪ ಭಾಗವನ್ನು ಶ್ರೀಮಾತೆಯವರಿಗೆ ಕೊಟ್ಟು, ಪ್ರಸಾದಕ್ಕಾಗಿ ಪ್ರಾರ್ಥಿಸಿದ. ಶ್ರೀಮಾತೆಯವರು ನಗುತ್ತ ಹೇಳಿದರು: " ಇಷ್ಟೊಂದು ಹೇಗೆ ತಾನೆ ತಿನ್ನಲಿ? ಸ್ವಲ್ಪ ಸ್ವಲ್ಪ ಕೊಡು." ಅನಂತರ ಸ್ವಲ್ಪ ತಿಂದು ಉಳಿದುದನ್ನು ಭಕ್ತನಿಗೆ ಕೊಟ್ಟರು. ಆತನು ಬಹಳ ಶ್ರದ್ಧೆಯಿಂದ ಪ್ರತಿ ಆಹಾರ ಪದಾರ್ಥವನ್ನೂ ಶ್ರೀಮಾತೆಯವರ ಪಾದಕ್ಕೆ ಮುಟ್ಟಿಸಿ, ಕಣ್ಣಿಗೊತ್ತಿಕೊಂಡು ಆನಂದದಿಂದ ನಮಸ್ಕರಿಸಿ ಬೀಳ್ಕೊಂಡ.

ಓಹ್! ಅದೆಂತಹ ಅದ್ಭುತ ದೃಶ್ಯ! ಶ್ರೀಮಾತೆಯವರು ಕೊರಳಲ್ಲಿ ಭಕ್ತ ಅರ್ಪಿಸಿದ ಮಾಲೆಯನ್ನು ಹಾಕಿಕೊಂಡು, ನಗುಮುಖದಿಂದ ಸ್ಥಿರವಾಗಿ ಕುಳಿತಿದ್ದಾರೆ! ಪಾದದ ಬಳಿ ಮುತ್ತುಗ ಮತ್ತು ಸುಂದರ ಗುಲಾಬಿ ಹೂವುಗಳು ಹರಡಿವೆ! ಭಕ್ತನ ಉತ್ಕಟ ಭಾವವನ್ನು ನೋಡಿ ಗೌರೀ ಮಾ ನಗುತ್ತ "ಅಮ್ಮಾ, ಒಳ್ಳೆಯ ಭಕ್ತನ ಕೈಯಲ್ಲಿ ಸಿಕ್ಕಿಬಿದ್ದಿದ್ದೀಯೆ ನೀನು" ಎಂದು ಹಾಸ್ಯ ಮಾಡಿದರು. ಭಕ್ತರೆಲ್ಲ ಹೊರಟುಹೋದ ಮೇಲೆ ಶ್ರೀಮಾತೆಯವರು ತಮ್ಮ ಕೊರಳಿನಲ್ಲಿದ್ದ ಹಾರವನ್ನು ತೆಗೆದು ಗೌರೀ ಮಾ ಕೊರಳಿಗೆ ಹಾಕಿದರು. ಪಾದಗಳ ಬಳಿ ಇದ್ದ ಹೂವುಗಳನ್ನು ಭಕ್ತರು ತೆಗೆದುಕೊಂಡು ಹೋದರು.

(ಮುಂದುವರಿಯುವುದು)